# ಜೋಕುಮಾರನ ಆಗಮನ



ಗಣೇಶ ಚೌತಿಯ ನಾಲ್ಕನೆಯ ದಿನಕ್ಕೆ ಕಿಳ್ಳೇಕ್ಯಾತ ಹುಟ್ಟುತ್ತಾನೆ. ಮರು ದಿನ ಜೋಕುಮಾರ ಜನಿಸುತ್ತಾನೆ. ಅಂದಿನಿಂದ ಏಳುದಿನಗಳ ಕಾಲ ಆತನ ಮೆರವಣಿಗೆ ಜೋಕುಮಾರನ ಹೊತ್ತ ಮಹಿಳೆಯರು ಮನೆಮನೆಗೆ ತೆರಳಿ ದವಸ ಧಾನ್ಯಗಳನ್ನು ಪಡೆದು ಪೂಜೆ ಮಾಡಿ ಬೇವಿನ ಸೆರಗನ್ನು ನೀಡುತ್ತಾರೆ. ಇದನ್ನು ಅನ್ನದಲ್ಲಿ ಬೆರಸಿ ಹೊಲಗಳಿಗೆ ಕೃಷಿಕರು ಹಾಕುತ್ತಾರೆ. ಈತ ಬಂದರೆ ಉತ್ತಮ ಮಳೆ– ಬಳೆ ಅಗುತ್ತದೆ ಎಂಬ ನಂಬಿಕೆ ಗ್ರಾಮೀಣ ರೈತಾಪಿ ಜನರದು.

ಶಿವನಿಗೆ ಜನರ ಕಷ್ಟ ಕೋಟಲೆಗಳನ್ನು ತಿಳಿಸಿ ಲೋಕಕ್ಕೆ ಒಳಿತನ್ನು ಮಾಡುತ್ತಾನೆ ಎಂಬ ಮಾತು ಇದೆ. ಬಹುಶಃ ನಮ್ಮ ಮುಂದಿನ ತಲೆಮಾರು ಈ ಕಲೆ ಸಂಸ್ಕೃತಿಯನ್ನು ಕಾಣುವುದೇ? ಈ ಆಧುನಿಕ ಯುಗದಲ್ಲಿ ಈ ಜೋಕುಮಾರನ ನೆನಪು, ಅವನ ಜನಪದ ಹಾಡು ಉಳಿಯುತ್ತವೆಯೇ? ಎಂಬ ಕಳವಳವನ್ನು ದೊಡ್ಡ ಕಣ್ಣುಗಳ ಕಪ್ಪು ಮುಖದ ಬೆಣ್ಣೆ ತುಂಬಿದ ಬಾಯಿಯ ಜೋಕುಮಾರ ಮೌನವಾಗಿ ಹೇಳಿದಂತೆ ಈ ಚಿತ್ರ ಕಂಡಾಗ ಭಾಸವಾಯಿತು.

–ರೇಶ್ಮಾ ಜಿ.ಎಂ., ಕೊಟ್ಟೂರು



# ಪುಡಿಗಾಸಿಗೊಂದು ಪೆಟ್ಟಿಗೆ

ಪಿಗ್ಗಿ ಬ್ಯಾಂಕ್, ಸೇವಿಂಗ್ಸ್ ಬ್ಯಾಂಕ್, ಪಾಕೆಟ್ ಮನಿ ಇವೆಲ್ಲ ಮಕ್ಕಳಲ್ಲಿ ಉಳಿತಾಯದ ಅರಿವು ಮೂಡಿಸಲು ಪೋಷಕರು ಪ್ರೋತ್ಸಾಹಿಸುವುದು ಇತ್ತೀಚಿನ ದಿನಗಳಲ್ಲಿ ಸಾಮಾನ್ಯ. ಆದರೆ ಅದು ಹಳೆಯ ಕಾಲದಲ್ಲೂ ಇತ್ತು ಎಂದು ನಮ್ಮ ಅಜ್ಜಿಗೆ ಎಂಬತ್ತು ವರ್ಷಗಳ ಹಿಂದೆ ಅವರ ತಂದೆ ಕಾಸನ್ನು ಕೂಡಿಡಲು ಕೊಡಿಸಿದ ಈ ಪುಟ್ಟ ಪೆಟ್ಟಿಗೆ ಸಾಕ್ಷಿಯಾಯಿತು. ಅದನ್ನು ನೋಡಿದಾಗ ಆಶ್ಚರ್ಯವಾಗಿದ್ದಷ್ಟೇ ಅಲ್ಲ. ಅದರಲ್ಲಿರುವ ಹಳೆಯ ನಾಣ್ಯಗಳು ಅದರಲ್ಲೂ ಸಾಮ್ರಾಟ ಐದನೇ ಜಾರ್ಜ್‌ನ ಕಾಲು ಆಣೆ ಮತ್ತು ಇನ್ನಿತರ ಲಾಂಛನವನ್ನು ಹೊಂದಿರುವ ಕೆಲವು ನಾಣ್ಯಗಳನ್ನು ನೋಡಿ ದಂಗಾದೆ. ನಮ್ಮ ತಾತ ಆರು ಕಾಸು ಒಂದು ಆಣೆ, ಹದಿನಾರು ಆಣೆ ಒಂದು ರೂಪಾಯಿ ಎನ್ನುತ್ತಿದ್ದ ಮಾತು ಮತ್ತೆ ನೆನಪಾಯಿತು.

–ಸುಲೋಚನ ಜೆ. ರಾವ್, ಮಲ್ಲೇಶ್ವರಂ

# ಬ್ರಹ್ಮಕಮಲ

ಉತ್ತರಾಖಂಡದ ಹೇಮಕುಂಡ ಸಾಹೇಬ್‌ನಲ್ಲಿ ಕಂಡುಬಂದ ಈ ಹೂವಿನ ಸ್ಥಳೀಯ ಹೆಸರು ಬ್ರಹ್ಮಕಮಲ. ಉತ್ತರಾಖಂಡದ ಚಾರುಧಾಮದ ಪವಿತ್ರ ಕೇದಾರನಾಥನಿಗೆ ಬ್ರಹ್ಮಕಮಲದಿಂದಲೇ ದಿನವೂ ಪೂಜೆ ನಡೆಯುತ್ತದೆ.

ಹಿಮಾಚಲ ಪ್ರದೇಶ, ಉತ್ತರಾಖಂಡ, ಉತ್ತರ ಬರ್ಮಾ ಮತ್ತು ನೈರುತ್ಯ ಚೀನಾಗಳಲ್ಲಿ ಬೆಳೆಯುವ ಇದು ಸಾಸುರಿಯಾ ಒಬ್ವಾಲ್ಲಾಟಾ ಹೂವಿನ ಜಾತಿಯ ಸಸ್ಯವಾಗಿದೆ. ಹಿಮಾಲಯದಲ್ಲಿ ಸುಮಾರು 3500–4500 ಮೀಟರ್ ಎತ್ತರದ ವ್ಯಾಪ್ತಿಯಲ್ಲಿ ಬೆಟ್ಟದ ಬಂಡೆಗಳ ಮತ್ತು ಹುಲ್ಲುಗಳ ನಡುವೆ ಮಾನ್ಸೂನ್ ಸಂದರ್ಭದಲ್ಲಿ (ಜುಲೈ–ಆಗಸ್ಟ್) ಅರಳಲು ಆರಂಭಿಸುತ್ತವೆ. 60 ಸೆಂ.ಮೀ ಎತ್ತರಕ್ಕೆ ಬೆಳೆಯುವ ಸಣ್ಣ ದೀರ್ಘಕಾಲಿಕ ಸಸ್ಯ. ಕಾಂಡಗಳು ನೆಟ್ಟಗೆ, ಪಕ್ಕೆಲುಬಿನಿಂದ ಟೊಳ್ಳಾಗಿರುತ್ತದೆ ಹೂವಿನ ತಲೆಗಳು ನೇರಳೆಬಣ್ಣದ್ದಾಗಿರುತ್ತದೆ. ಇದು ಶೀತ ಪರ್ವತ ಪರಿಸರದಿಂದ ರಕ್ಷಣೆ ಪಡೆಯುತ್ತವೆ ಹಾಗೂ ಅಕ್ಟೋಬರ್‌ವರೆಗೂ ಹೂವುಗಳು ಕಾಣಸಿಗುತ್ತವೆ.

–ಎಸ್. ಪ್ರಭಾವತಿ, ಬೆಂಗಳೂರು

